## ಧಾರಾವಾಹಿ ಲೇಖನ

# ರಾಮಕೃಷ್ಣ ಮಹಾಸಂಘದ ಗುರು ಪರಂಪರೆ

ಮೀನಾ ವಿ.

**(ಹಿಂದಿನ ಸಂಚಿಕೆಯಿಂದ)**

### ಸ್ವಾಮಿ ಶಂಕರಾನಂದಜಿ ಮಹಾರಾಜ್

**ಸ್ವಾ**ಮಿ ಶಂಕರಾನಂದರ ಬಗ್ಗೆ ರವೀಂದ್ರನಾಥ ಠಾಕೂರರು ಹೀಗೆ ಹೇಳಿದರಂತೆ: "ಮಧುರ ಮತ್ತು ಪ್ರೀತಿಯುತ ಸಹವಾಸ ಅವರದು." ಇನ್ನೂ ಬಾಲಕ ರಾಗಿದ್ದ ಅವರನ್ನು ಸ್ವಾಮಿ ವಿವೇಕಾನಂದರು ಆಪಾದ ಮಸ್ತಕ ದಿಟ್ಟಿಸಿನೋಡಿದರಂತೆ. ಸ್ವಾಮಿ ಬ್ರಹ್ಮಾನಂದರು ಅವರ ಕೈಹಿಡಿದು, "ನಿನಗೆ ಭಗವಂತನ ದರ್ಶನವಾಗುವುದು" ಎಂದು ನುಡಿದರು. ಶ್ರೀರಾಮಕೃಷ್ಣರ ಗೃಹಸ್ಥಶಿಷ್ಯರಾದ ಗಿರೀಶ್ ಚಂದ್ರ ಘೋಷ್ ಅದನ್ನು ಅನುಮೋದಿಸುತ್ತ, "ಹೌದು, ನಿನಗೆ ಅದು ಸಾಧ್ಯವಿದೆ" ಎಂದರು. ಹೀಗೆ ಇಷ್ಟೊಂದು ಮಹಾನ್ ವ್ಯಕ್ತಿಗಳ ಕೃಪಾಶೀರ್ವಾದಗಳಿಗೆ ಪಾತ್ರರಾದವರು ರಾಮಕೃಷ್ಣ ಮಹಾಸಂಘದ ಏಳನೆಯ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಶಂಕರಾನಂದಜಿ ಮಹಾರಾಜ್ ಅವರು.



ಅವರದು ವಾತ್ಸಲ್ಯಮಯ ವ್ಯಕ್ತಿತ್ವ. ಅವರು ಅತ್ಯಂತ ಸರಳರು ಮತ್ತು ಕರ್ತವ್ಯಪರರು; ಅದಲ್ಲದೆ ಬಹಳ ಕಠೋರ ತಪಸ್ವಿಗಳೂ ಆಗಿದ್ದರು. ಅವರು ಚಿಕ್ಕ ವಯಸ್ಸಿನಲ್ಲಿಯೇ ಹೇಳುತ್ತಿದ್ದರಂತೆ, "ನಾನು ಸರ್ವಸಂಗ ಪರಿತ್ಯಾಗ ಮಾಡಿ ಸಾಧು ಆಗುವೆ." ಅವರು ತಮ್ಮ ಮಧುರ ವ್ಯವಹಾರದಿಂದ ಎಲ್ಲರ ಪ್ರೀತಿಗೆ ಪಾತ್ರರಾಗುತ್ತಿದ್ದರು. ಯಾರಾದರೂ ಅವರನ್ನು ಹೊಗಳಿದಾಗ, ನಿರಭಿಮಾನಿಯಾದ ಅವರು ಹೇಳುತ್ತಿದ್ದರು, "ನನಗೇಕೆ ಗೌರವ, ಪ್ರಶಂಸೆ? ಇವೆಲ್ಲವೂ ಭಗವಂತನ ಕೃಪೆಯಿಂದಲೇ ನಡೆಯುತ್ತಿವೆ ಎಂದು ನನಗೆ ಪೂರ್ಣ ವಿಶ್ವಾಸವಿದೆ."

ಪರಮಪೂಜ್ಯ ಶ್ರೀಮತ್ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆ ಮತ್ತು ಸಂನ್ಯಾಸದೀಕ್ಷೆಯನ್ನು ಪಡೆದ ಸ್ವಾಮಿ ಶಂಕರಾನಂದಜಿ ಅವರು ತಮ್ಮ ಗುರುವಿನ ಸೇವಕರಾಗಿ ಸೇವೆ ಸಲ್ಲಿಸಿದರು. ಅಮೆರಿಕದಿಂದ ವಾಪಸ್ಸಾಗಿದ್ದ ಸ್ವಾಮಿ ಅಭೇದಾನಂದರು ಅವರನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗಲು ಬಯಸಿದ್ದರಂತೆ! ಸ್ವಾಮೀಜಿಯವರು ೧೯೫೧ ರಲ್ಲಿ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿ ಚುನಾಯಿತರಾದರು. ಇವರ ಮಾರ್ಗದರ್ಶನದಲ್ಲಿಯೇ ಶ್ರೀಶಾರದಾ ಮಠ ಎಂಬ ಸ್ತ್ರೀಯರಿಗೆ ಮೀಸಲಾದ ಮಠವೊಂದು ೧೯೫೪ ರಲ್ಲಿ ಸ್ಥಾಪನೆಯಾಯಿತು. ಸಾಧುಚರಿತ್ರರಾದ ಪೂಜ್ಯ ಶಂಕರಾನಂದಜಿ ಅವರು ಅನೇಕ ಮುಮುಕ್ಷುಗಳನ್ನು ಭಗವಂತನ ಕಡೆಗೆ ಕರೆದುಕೊಂಡು ಹೋದರು. ಇವರು ೧೯೬೨ ರಲ್ಲಿ ಮಹಾ ಸಮಾಧಿಯನ್ನು ಹೊಂದಿದರು.

### ಸ್ವಾಮಿ ವಿಶುದ್ಧಾನಂದಜಿ ಮಹಾರಾಜ್

ಸ್ವಾಮಿ ವಿಶುದ್ಧಾನಂದಜಿ ಅವರು ಶ್ರೀಮಾತೆ ಶಾರದಾದೇವಿಯವರ ವಿಶೇಷ ಕೃಪೆಗೆ ಪಾತ್ರರಾದವರು. ಚಿಕ್ಕ ವಯಸ್ಸಿನಿಂದಲೂ ಅಧ್ಯಯನಶೀಲರಾಗಿದ್ದ ಅವರು ಒಂದು ದಿನ 'ರಾಮಕೃಷ್ಣರ ಜೀವನ ಮತ್ತು ಸಂದೇಶ' ಎಂಬ ಪುಸ್ತಕವನ್ನು ಗ್ರಂಥಾಲಯದಲ್ಲಿ ಕಂಡು, ಓದಿದರು; "ಓಹೋ, ಇವರಿಗಾಗಿಯೇ ನಾನು ಇಷ್ಟು ದಿನ ಹುಡುಕಾಡುತ್ತಿದ್ದೆ!" ಎಂದುಕೊಂಡರು. ಅನಂತರ ಶ್ರೀಮಾತೆ ಶಾರದಾದೇವಿಯಯವರ ಬಳಿ ಮಂತ್ರದೀಕ್ಷೆ ಪಡೆದು ಜಪತಪಗಳನ್ನು ಮಾಡಲು ಆರಂಭ ಮಾಡಿದಾಗ, ಎಷ್ಟೊಂದು ಆನಂದಭರಿತರಾಗಿರುತ್ತಿದ್ದರೆಂದರೆ, ಜಯರಾಂಬಾಟಿಯಲ್ಲಿರುವ ಆಮೋದರ ನದಿಯ ನಿರ್ಜನ ತೀರಕ್ಕೆ ಓಡಿಹೋಗಿ, ನರ್ತನ ಮಾಡುತ್ತಿದ್ದರಂತೆ!



ಸ್ವಾಮಿಗಳು ತಮ್ಮ ಇಡೀ ಜೀವನವನ್ನು ಕರ್ಮಯೋಗದ ಅನುಷ್ಠಾನದಲ್ಲಿ ಕಳೆದರು. ಅದರಲ್ಲಿ ಅವರು ಅಪಾರ ಆನಂದವನ್ನು ಕಾಣುತ್ತಿದ್ದರು. ಅವರು ಬೆಂಗಳೂರಿನ ರಾಮಕೃಷ್ಣ ಆಶ್ರಮದಲ್ಲಿ ಇದ್ದರು. ಶ್ರೀಮಾತೆಯವರು ದಕ್ಷಿಣಭಾರತ ಪ್ರವಾಸಕ್ಕೆ ಬಂದಾಗ, ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಇವರ ಮೇಲೆ ಬಿತ್ತು. ಸ್ವಾಮಿ ಬ್ರಹ್ಮಾನಂದಜಿ ಅವರ ನಿಕಟ ಸಾನ್ನಿಧ್ಯವೂ ಅವರಿಗೆ ಪ್ರಾಪ್ತವಾಗಿತ್ತು. ಮಾಯಾವತಿಯ ಅದ್ವೈತ ಆಶ್ರಮದಲ್ಲಿ ತಂಗಿದ್ದಾಗ, ಅವರು ಕರ್ಮ ಮತ್ತು ತಪಸ್ಸು – ಇವೆರಡನ್ನೂ ಒಟ್ಟೊಟ್ಟಿಗೆ ಮಾಡುತ್ತಿದ್ದರು. ಆಗಾಗ್ಗೆ ಪವಿತ್ರಕ್ಷೇತ್ರವಾದ ಕಾಶಿಕ್ಷೇತ್ರದಲ್ಲಿ ನೆಲೆಸಿ ತಪಸ್ಸನ್ನಾಚರಿಸಿದರು. ಭಾರತದ ನಾನಾ ಕಡೆ ಪ್ರವಾಸ ಮಾಡಿ, ಧರ್ಮ ಪ್ರಚಾರ ಮತ್ತು ಸೇವಾ ಕಾರ್ಯಗಳನ್ನು ಮಾಡಿದರು. ೧೯೬೨ ರಲ್ಲಿ ಮಹಾಸಂಘದ ಪರಮಾಧ್ಯಕ್ಷರಾದ ಅವರು, ದೇಹಾರೋಗ್ಯ ಸರಿಯಾಗಿ ಇಲ್ಲದಿದ್ದರೂ, ಎಲ್ಲ ಕಾರ್ಯಗಳನ್ನೂ ನಗುಮುಖದಿಂದ ಮಾಡುತ್ತಿದ್ದರು. ತಮ್ಮನ್ನು ನೋಡಲು ಬಂದವರಿಗೆ, ಜಿಜ್ಞಾಸು ಭಕ್ತರಿಗೆ, ಸಾಧು ಬ್ರಹ್ಮಚಾರಿಗಳಿಗೆ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯಲು ಬೇಕಾದ ಉತ್ಸಾಹ, ಪ್ರೇರಣೆ ನೀಡುತ್ತಿದ್ದರು.

ಒಂದು ದಿನ ತೀವ್ರಧ್ಯಾನದಲ್ಲಿ ಮಗ್ನರಾಗಿದ್ದ ಅವರು, ಕಣ್ಣು ತೆರೆದು ನೋಡಿದಾಗ ಇಡೀ ಜಗತ್ತು ಮಧುವಿನಿಂದ ತುಂಬಿ ಹೋಗಿರುವಂತೆ ಕಂಡರು. ಮನುಷ್ಯರು, ಜೀವಜಂತುಗಳು, ಗಿಡಮರಗಳು– ಎಲ್ಲವೂ ಮಧುಮಯವಾಗಿದ್ದವು! ಜೇನಿನ ಮಳೆಗರೆಯುತ್ತಿತ್ತು! ಗಿಡಮರಗಳಿಂದ ಜೇನು ತೊಟ್ಟಿಕ್ಕುತ್ತಿತ್ತು! ವೇದಕಾಲೀನ ಋಷಿಗಳು ಇದೇ ತರಹದ ಅನುಭವವನ್ನು ಮಧುಸೂಕ್ತದಲ್ಲಿ ವಿವರಿಸಿದ್ದಾರೆ.

ಇವನ್ನು ಆಧುನಿಕ ಕಾಲದಲ್ಲಿಯೂ ಪಡೆದ ಮಹಾಪುರುಷರು ಸ್ವಾಮಿ ವಿಶುದ್ಧಾನಂದಜಿ ಅವರು.

## ಸ್ವಾಮಿ ಮಾಧವಾನಂದಜಿ ಮಹಾರಾಜ್

ಸ್ವಾಮಿ ವಿಶುದ್ಧಾನಂದರಂತೆ ಸ್ವಾಮಿ ಮಾಧವಾನಂದಜಿ ಅವರೂ ಕೂಡ ಶ್ರೀಮಾತೆ ಶಾರದಾದೇವಿಯವರ ಅನುಗ್ರಹಕ್ಕೆ ಪಾತ್ರರಾದವರು. ಚಿಕ್ಕ ವಯಸ್ಸಿನಲ್ಲಿ ತೀವ್ರ ಅನಾರೋಗ್ಯದಿಂದ ನರಳುತ್ತಿದ್ದಾಗ, ಅವರ ತಂದೆತಾಯಿಗಳು ಆ ಊರಿನಲ್ಲಿದ್ದ ಒಬ್ಬ ಸಾಧುವಿಗೆ ಶರಣಾದರು. ಆ ಸಾಧು ಸ್ವಲ್ಪ ಹೊತ್ತು ಧ್ಯಾನಸ್ಥರಾಗಿ ಹೀಗೆ ಹೇಳಿದರು: "ಈ ಮಗು ಈಗ ಸಾಯುವುದಿಲ್ಲ. ಬಹುಕಾಲ ಬಾಳಿ ಬದುಕುತ್ತದೆ. ಅನೇಕ ಉತ್ತಮ ಕಾರ್ಯಗಳನ್ನು ಜಗತ್ತಿನ ಹಿತಕ್ಕಾಗಿ ಮಾಡುತ್ತದೆ. ಇದು ಸಾಧಾರಣ ಶಿಶುವಲ್ಲ. ಒಬ್ಬ ಮಹಾನ್ ವ್ಯಕ್ತಿ." ಸಾಧುವಿನ ಮಾತು ಮುಂದೆ ನೂರಕ್ಕೆ ನೂರು ಸತ್ಯವಾದುದನ್ನು ನೋಡುತ್ತೇವೆ.



ಪೂಜ್ಯ ಸ್ವಾಮಿ ಮಾಧವಾನಂದಜಿ ಅವರ ಜೀವನದಲ್ಲಿ **ಧ್ಯಾನ ಮತ್ತು ಕರ್ಮ** – ಈ ಎರಡೂ ಪವಿತ್ರ ಪ್ರವಾಹಗಳ ಸುಮಧುರ ಮಿಲನವನ್ನು ನೋಡುತ್ತೇವೆ. ಬಾಲ್ಯದಿಂದಲೂ ಮಾನವ ಸೇವೆ ಮತ್ತು ಈಶ್ವರದರ್ಶನ – ಇವೇ ಅವರ ಜೀವನದ ಗುರಿಗಳಾಗಿದ್ದವು.

ಸ್ವಾಮಿ ಮಾಧವಾನಂದಜಿ ಅವರು ದೊಡ್ಡ ವಿದ್ವಾಂಸರು. ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಬಹುಕಾಲ ಸೇವೆ ಸಲ್ಲಿಸಿದ ಸ್ವಾಮಿಗಳು ಶ್ರೀರಾಮಕೃಷ್ಣ ಕಥಾಮೃತವನ್ನು ಹಿಂದಿ ಭಾಷೆಗೆ ಅನುವಾದ ಮಾಡಿದರು. ಶಾಸ್ತ್ರವೇತ್ತರಾಗಿದ್ದ ಸ್ವಾಮಿ ಮಾಧವಾನಂದರು ಬೃಹದಾರಣ್ಯಕ ಉಪನಿಷತ್ತಿನ ಮೇಲೆ ಶ್ರೀಶಂಕರಾಚಾರ್ಯರು ಬರೆದಿರುವ ಭಾಷ್ಯವನ್ನು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಅದು ಅನೇಕ ಪಂಡಿತರ ಪ್ರಶಂಸೆಗೆ ಪಾತ್ರವಾಗಿದೆ. ಇದಲ್ಲದೆ ಅನೇಕ ವೇದಾಂತ ಗ್ರಂಥಗಳನ್ನು ಅವರು ಬಂಗಾಳಿ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೆ ಅನುವಾದಿಸಿದ್ದಾರೆ.

ಇದರೊಂದಿಗೆ, ಸ್ವಾಮಿ ವಿವೇಕಾನಂದರ ಸೇವಾದರ್ಶವನ್ನು ಪೂರ್ಣವಾಗಿ ಸ್ವೀಕರಿಸಿದ್ದ ಸ್ವಾಮಿ ಮಾಧವಾನಂದಜಿ ಅವರು ಅನೇಕ ಜನಕಲ್ಯಾಣ ಕಾರ್ಯಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು. ಸುಮಾರು ಎರಡು ದಶಕಗಳ ಕಾಲ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು.

ಸ್ವಾಮಿ ಮಾಧವಾನಂದರ ಮಾತುಗಳನ್ನು ಕೇಳುತ್ತಿದ್ದವರಿಗೆ, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರೇ ಅವರ ಮೂಲಕ ಮಾತನಾಡುತ್ತಿದ್ದಾರೆ ಎಂದು ಅನ್ನಿಸುತ್ತಿತ್ತು. ನೂರಾರು ಕಾರ್ಯಗಳ ನಡುವೆಯೂ ಅವರ ಮನಸ್ಸು ಶ್ರೀರಾಮಕೃಷ್ಣರ ಚರಣಾರವಿಂದಗಳ ಧ್ಯಾನದಲ್ಲಿಯೇ ಮಗ್ನವಾಗಿತ್ತು.

ಸಾಧುಜೀವನ ನಡೆಸುವವರು ವ್ಯರ್ಥವಾಗಿ ಸಮಯ ಹಾಳು ಮಾಡಬಾರದೆಂದೂ ಭಗವಂತನನ್ನೇ ಆಶ್ರಯಿಸಿ ಜೀವನ ನಡೆಸಬೇಕೆಂದೂ ಸ್ವಾಮಿ ಮಾಧವಾನಂದಜಿ ಅವರು ಹೇಳುತ್ತಿದ್ದರು. ಗೃಹಸ್ಥರಿಗೆ ಅವರ ಉಪದೇಶ ಇದು: "ಗೃಹಸ್ಥಾಶ್ರಮದಲ್ಲಿದ್ದೂ ಸಾಧ್ಯವಾದ ಮಟ್ಟಿಗೆ, ಭಗವಂತನನ್ನು ಸ್ಮರಿಸಲು ಪ್ರಯತ್ನಿಸಿರಿ. ನಿಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡಿರಿ."

(ಮುಂದುವರಿಯುವುದು)

## ಭಗವಂತನನ್ನು ಅರಸುತ್ತ

ಸ್ವಾಮಿ ಯತೀಶ್ವರಾನಂದ

### ಸಾಧನೆಯಿಂದ ಆಗುವ ಆಧ್ಯಾತ್ಮಿಕ ಆನಂದ

ಭಕ್ತನಿಗೆ ಗುರುವು ಸಾಧನೆಯ ಬಗ್ಗೆ ಉಪದೇಶವನ್ನು ನೀಡುವನು. ಆದರೂ ಒಬ್ಬನ ಮನಸ್ಸು ಆತನಿಗೆ ಶ್ರೇಷ್ಠವಾದ ಗುರುವಾಗಿ ಪರಿಣಮಿಸುವುದು. ಮನಸ್ಸಿನ ಸಹಾಯವಿಲ್ಲದೆ ಯಾವ ಸಾಧನೆಯೂ ಸಾಧ್ಯವಿಲ್ಲ. ಅದಕ್ಕಾಗಿ ಮನಸ್ಸನ್ನು ಪರಿಶುದ್ಧಗೊಳಿಸಬೇಕು. ಅದನ್ನು ಜಪ ಮತ್ತು ಧ್ಯಾನಸಾಧನೆಗಳಿಂದ ಮಾಡಬೇಕು. ಇವುಗಳಿಂದ ನಮ್ಮ ದೇಹವು ಶುದ್ಧವಾಗುತ್ತದೆ; ನಾವು ಸಣ್ಣಪುಟ್ಟ ರೋಗಗಳಿಗೆ ಒಳಗಾಗುವುದಿಲ್ಲ. ಆಗ ದೇಹವು ದೃಢವೂ ಆರೋಗ್ಯಕರವೂ ಆಗಿರುತ್ತದೆ. ಮನಸ್ಸೂ ಕೂಡ ಶಕ್ತಿಯುತವಾಗಿದ್ದು, ನಮ್ಮ ಹೃದಯವು ವಿಕಾಸ ಹೊಂದುತ್ತದೆ. ಹಾಗಾದಾಗ, ನಾವು ನಮ್ಮ ಅಂತರಂಗದಲ್ಲಿರುವ ಸತ್ಯತತ್ತ್ವದೊಡನೆ ಹೆಚ್ಚು ಹೆಚ್ಚು ಸಂಪರ್ಕವನ್ನು ಹೊಂದುತ್ತೇವೆ. ಸತ್ಯವು ನಮ್ಮೊಳಗಿನಿಂದಲೇ ಪ್ರಕಟಗೊಳ್ಳುತ್ತ ಬರುತ್ತದೆ. ಆಗ ನಾವು ಅವ್ಯಕ್ತ ಆನಂದವನ್ನು ಅನುಭವಿಸುತ್ತೇವೆ. ಸಿಹಿಯನ್ನು ತಿಂದು ಮೂಕ ಮನುಷ್ಯನು ಅದರ ರುಚಿಯ ಬಗ್ಗೆ ಯಾರಿಗೂ ಹೇಳಲಾರನಷ್ಟೆ. ಆಧ್ಯಾತ್ಮಿಕ ಜಾಗೃತಿಯ ಆನಂದವೂ ಅದೇ ರೀತಿ ಇರುವುದು. ಇದೇ ಪರೀಕ್ಷೆ – ಈ ಪರಮಾತ್ಮ ತತ್ತ್ವದ ಸಂಪರ್ಕಕ್ಕೆ ಬಂದಹಾಗೆಲ್ಲ, ನಾವು ಹೇಳಲಾಗದ ಆನಂದವನ್ನು ನಮ್ಮಲ್ಲಿಯೇ ಅನುಭವಿಸುತ್ತೇವೆ.

ಧ್ಯಾನಮಾರ್ಗದಲ್ಲಿ ಅನೇಕ ಅಡಚಣೆಗಳಿವೆ. **ಸಂದೇಹ, ಅಸೂಯೆ, ಮಾನಸಿಕ ಚಂಚಲತೆ** ಮುಂತಾದವು ಕೆಲವು ಅಡಚಣೆಗಳು. ಅವುಗಳಲ್ಲಿ ಸಂದೇಹ ಅತಿ ದೊಡ್ಡ ಅಡಚಣೆ. ಅದನ್ನು ನಿವಾರಿಸಿ, ನಾವು ಸಂಪೂರ್ಣ ನಂಬಿಕೆಯನ್ನು ಹೊಂದಿರಬೇಕಾದುದು ಅವಶ್ಯಕ. ಪ್ರಾಪಂಚಿಕ ಸಂಗತಿಗಳಲ್ಲಿ ಇರುವ ಮನಸ್ಸಿನ ಚಂಚಲತೆಯನ್ನೂ ನಾವು ನಿವಾರಿಸಿಕೊಳ್ಳಬೇಕು. ಅದಕ್ಕೆ ಬದಲಾಗಿ ಭಗವತ್ಸಾಕ್ಷಾತ್ಕಾರಕ್ಕಾಗಿ ವ್ಯಾಕುಲರಾಗಬೇಕು. ಈ ಸ್ಥಿತಿ ನಿಜವಾಗಿಯೂ ಭಗವಂತನ ಅನುಗ್ರಹದಿಂದಲೇ ಬರುವಂಥದ್ದು. ನಮ್ಮಲ್ಲಿ ಉಂಟಾಗುವ ಭಾವೋದ್ರೇಕಗಳನ್ನು ಆಧ್ಯಾತ್ಮಿಕ ಸಂವೇದನೆಗಳೆಂದು ತಪ್ಪಾಗಿ ತಿಳಿಯುತ್ತೇವೆ. ನಾವು ಸದಾ ಜಾಗ್ರತರಾಗಿದ್ದು, ಈ ಬಗೆಯ ತಪ್ಪು ತಿಳಿವಳಿಕೆಯನ್ನು ದೂರದಲ್ಲಿಟ್ಟಿರಬೇಕು.

ಆಧ್ಯಾತ್ಮಿಕ ಸಾಧನೆಯಲ್ಲಿ ರುಚಿಯು ಒಡನೇ ಬರುವುದಿಲ್ಲ. ಅದಕ್ಕಾಗಿ ಅಗಾಧ ಪ್ರಯತ್ನ ಮಾಡಬೇಕಾಗುತ್ತದೆ; ನಮ್ಮೆಲ್ಲ ಶಕ್ತಿಗಳನ್ನೂ ಅದಕ್ಕಾಗಿ ಮಾತ್ರವೇ ಮುಡುಪಾಗಿಡಬೇಕಾಗುತ್ತದೆ. ಸ್ವಲ್ಪಕಾಲದ ನಂತರ, ಅಲ್ಪಪ್ರಗತಿಯನ್ನು ಕಂಡಾಗ ನಾವು ತೃಪ್ತರಾಗಬಾರದು. ಪರಮಗತಿಯನ್ನು ತಲುಪುವವರೆಗೆ ಜ್ವಲಂತವಾದ ಅತೃಪ್ತಿಯನ್ನು ಕಾಯ್ದುಕೊಂಡು ಬರಬೇಕು. ಶ್ರೀರಾಮಕೃಷ್ಣರು ಜಗನ್ಮಾತೆಯನ್ನು ಹೀಗೆ ಕೂಗಿ ಕರೆದರು: "ಅಮ್ಮಾ, ಇನ್ನೊಂದು ದಿನ ಸಾಗಿಹೋಯಿತು. ನಾನಿನ್ನೂ ನಿನ್ನನ್ನು ನೋಡಲಿಲ್ಲ." ಇದು, ನಿಜವಾದ ಆಧ್ಯಾತ್ಮಿಕ ಜಾಗೃತಿ ಹೇಗಿರುತ್ತದೆ ಎನ್ನುವುದರ ಪರಿಚಯವನ್ನು ನಮಗೆ ಮಾಡಿಸುತ್ತದೆ.

(ಮುಂದಿನ ತಿಂಗಳು: **ಸಾಧನೆಯಲ್ಲಿ ಸಂತೋಷದ ಅನುಭವ** )